# ನೈವೇದ್ಯ ಸುಳಾದಿ

**ಧ್ರುವತಾಳ**

ಅನ್ನಾಭಿಮಾನಿ ಚಂದ್ರ ಅಲ್ಲಿ ಕೇಶವ ಪರ
ಮಾನ್ನದೊಳು ಭಾರತೀ ನಾರಾಯಣಾ
ಪೂರ್ಣ ಭಕ್ಷಗಳಲ್ಲಿ ಸೂರ್ಯ ಮಾಧವ ಘೃತಕೆ
ಕನ್ಯಾಲಕುಮಿ ಅಲ್ಲಿ ಗೋವಿಂದನೋ
ಬೆಣ್ಣೆಪಾಲಿನಲ್ಲಿ ಸರಸ್ವತಿ ವಿಷ್ಣು ಶಿರೋ
ರನ್ನ ಮಂಡಿಗಿಯಲ್ಲಿ ವಾಗೀಶ ಮಧುಸೂದನಾ
ಬೆಣ್ಣೆಯಲ್ಲಿ ವಾಯು ಅಲ್ಲಿ ತ್ರಿವಿಕ್ರಮಾ
ಘನ್ನ ದಧಿಯಲ್ಲಿ ಚಂದ್ರ ವರುಣ ವಾಮನ್ನ
ಚನ್ನಾ ಸೂಪಿನಲ್ಲಿ ಗರುಡ ಶ್ರೀಧರದೇವ
ಮುನ್ನೆ ಪತ್ರಾ ಶಾಖದಲ್ಲಿ ಮಿತ್ರನು ಹೃಷೀಕೇಶ
ಇನ್ನು ಫಲ ಶಾಖಗಳಲ್ಲಿ ಸರ್ಪ ಪದುಮನಾಭ
ಬಣ್ಣಿಪೆ ಆಮ್ಲದಲ್ಲಿ ಪಾರ್ವತಿ ದಾಮೋದರ
ಅನಾಮ್ಲಪತಿ ರುದ್ರಾ ಅಲ್ಲಿ ಸಂಕರುಷಣಾ
ಕಣ್ಣಿಗೆ ಇಂಪಾದ ಸಕ್ಕರಿಯಲ್ಲಿ ಸುರವ
ರೇಣ್ಯಾ ಇಂದ್ರಾನು ತದ್ಗತ ವಾಸುದೇವ
ಪನ್ನಗಶಾಯಿ ನಮ್ಮ ವಿಜಯವಿಠಲರೇಯನ ಪಾ-
ವನ್ನ ಮೂರ್ತಿಯನೆನಿಸಿ ಪವಿತ್ರ ನೀನಾಗೋ । ೧ ।

**ಮಟ್ಟತಾಳ**

ಪರಿ ಪರಿ ಸೋಪಸ್ಕರದಲ್ಲಿಗೆ ಅಭಿಮಾನಿ
ಪರಮೇಷ್ಠಿಯನ್ನಿ ಆತಗೆ ಪ್ರದ್ಯುಮ್ನ
ತರುವಾಯ ಕಟುದ್ರವ್ಯಕ್ಕೆ ಯಮರಾಯ
ಇರುತಿಪ್ಪನು ಅಲ್ಲಿ ಅನಿರುದ್ಧ ಮೂರುತಿ

ಸರಕು ಸಂಭಾರಗಳು ಇಂಗು ಸಾಸಿವೆ ಏಳಾ
ಮರೀಚಿ ಜೀರಿಗೆ ಕರ್ಪೂರ ಚಂದನ ಕೇ
ಸರ ಮೊದಲಾದ ಪರಿಪರಿ ವಿಧವಾದ
ಪರಿಮಳ ದ್ರವ್ಯಕ್ಕೆ ಮನುಮಥ ಅಧಿಪತಿ
ಪುರುಷೋತ್ತಮ ದೇವನು ವಾಸವಾಗಿಹನಯ್ಯ
ಪರೀಕ್ಷಿಸು ತೈಲ ಪಕ್ವಕೆ ಜಯಂತ
ವರ ಅಧೋಕ್ಷಜ ಮೂರುತಿ ಪೊಂದಿಕೊಂಡು ನಿತ್ಯ
ಮರಳೆ ಸಂಡಿಗೆಯಲ್ಲಿ ದಕ್ಷ ಪ್ರಜೇಶ್ವರ
ನರಹರಿ ಅಲ್ಲಿಪ್ಪ ಅದ್ಭುತ ಕಾರ್ಯಾನು
ಅರೆಮರೆ ಇಲ್ಲದೆ ಉದ್ದಿನ ಭಕ್ಷದಲ್ಲಿ
ಇರುತಿಪ್ಪನು ಮನು ಅಲ್ಲಿ ಅಚ್ಯುತ ಮೂರ್ತಿ
ಸುರುಚಿ ಲವಣದಲ್ಲಿ ನಿಋತಿಮತಿ ಜನಾರ್ದನ
ಸ್ಥಿರವೆನ್ನಿ ಲವಣ ಶಾಖಕ್ಕಭಿಮಾನಿ
ಮರೀಚಿ ಪ್ರಾಣನು ಅಲ್ಲಿ ಉಪೇಂದ್ರ ಭಗವಂತ
ಪರಮ ಶೋಭಿತ ತಾಂಬೂಲಕೆ ಗಂಗಾ
ಹರಿನಾಮಕ ದೇವ ಸ್ವಾದೋದಕದಲ್ಲಿ
ತರಣಿ ಸಮನ ಪುತ್ರ ಶ್ರೀಕೃಷ್ಣನು ಎನ್ನಿ
ಸುರರ ಮಸ್ತಕ ಮಣಿ ವಿಜಯವಿಠಲರೇಯಾ
ಸ್ಮರಿಸಿದ ಸುಜನಕೆ ತಿಳಿಪುವ ಇದರಂತೆ । ೨ ।

**ತ್ರಿವಿಡಿತಾಳ**

ಪಾಕ ಶುದ್ಧಿಗೆ ಪುಷ್ಕರ ಹಂಸನಾಮಕ ದೇವ
ಬೇಕಾದ ಸ್ವಾದುರಸಗಳಿಗೆ ರತಿ ವಿಶ್ವಾ
ಕಾಕುಲಾತಿ ಸಲ್ಲವಲಿಗೆ ಪಾವಕ ಭೃಗು
ನೀ ಕೇಳು ಶುಷ್ಕ ಗೋಮಯ ಪಿಂಡಕ್ಕೆ ಈರ್ವರಾ
ವೋಕುಳಿನಾಮಕ ವಸಂತ ಋಷಭನು

ಪಾಕ ಕರ್ತಳು ಶ್ರೀದೇವಿ ವಿಶ್ವಂಭರ ವೇ
ದಿಕಾಮಂಟಪ ಸಹ ಭೂದೇವಿ ಸೂಕರಾ
ಆಕಾಶ ಭಾಗಕ್ಕೆ ಗಣಪತಿ ಕುಮಾರಾ
ಶ್ರೀಕಾಂತನೀತನೋ ಆ ವರ್ಣಕ್ಕಭಿಮಾನಿ
ಸಾಕಾರವಾಗಿದ್ದ ವಿಷ್ವಕ್ಸೇನ ಪುರುಷಲೋಕ
ಪವಿತ್ರ ತುಲಸಿಯಲ್ಲಿ ರಮಾ ಕಪಿಲಾ
ರಾಕೇಂದುವಿನಂತೆ ಪಾಕ ಪಾತ್ರಿಗೆ ಕೇಳು
ಕಾಕೋದರನ ರಾಣಿ ವಾರುಣಿ ಅನಂತಾ
ಲೋಕಾಂಬಿಕನಂತೆ ಪೊಳೆವ ಭೋಜನಪಾತ್ರಿಗೆ
ಲೋಕ ಜನನಿ ದುರ್ಗಾ ಹರಿರಾಣಿ ಸತ್ಯ
ಶೋಕ ಕಳೆವ ನಾನಾ ಮಾಟ ತಿದ್ದಿದ ಮಾ
ಣಿಕಮಯ ಬಟ್ಟಲಿಗೆ ಸೌಪರ್ಣ ದತ್ತಾನು
ಶ್ರೀಕಳತ್ರ ನಮ್ಮ ವಿಜಯವಿಠಲರೇಯ ವಿ–
ವೇಕವಂತರ ಚಿತ್ತದಲಿ ಕೈಕೊಂಬನು । ೩ ।

**ಅಟ್ಟತಾಳ**

ಓದನ ಸರಸ್ವತಿ ಪರಮೇಷ್ಟಿಮಾಳ್ಪರು
ಶ್ರೀದೇವಿ ಚನ್ನಾಗಿ ಸೂಪಮಾಳ್ಪರು ಕೇಳಿ
ಆದಿ ಜಗದ್ಗುರು ಭಕ್ಷ ಮಾಳ್ಪನು ಸುರುಚಿ
ಯಾದ ಪರಮಾನ್ನ ಭಾರತಿ ಮಾಳ್ಪಳು
ಸ್ವಾದು ಶಾಖಾ ಫಲಾದಿಗಳು ಇಂದ್ರಾದಿ
ಚ್ಯಾದ್ಯರು ಮಾಡುವರು ಇಂತು
ಮಾಧವನ ಮುಂದೆ ನೈವೇದ್ಯ ಇಡಬೇ
ಕಾದ ಲಕ್ಷಣ ತಿಳಿ ತಾರತಮ್ಯದ ದಿಕ್ಕು
ಭೇದಗಳಿಂದಲಿ ಅಗ್ನಿ ಕೋಣೆಗೆ ಭಕ್ಷ್ಯ

ಐದು ಮೊಳಿಯ ದಿಕ್ಕಿನಲ್ಲಿ ಪರಮಾನ್ನ
ವಾದಾವಿಲ್ಲದೆ ನೈಋುತ್ತಿ ಕೋಣಿಲಿ ಲೇ
ಹಾದಿಗಳಿಡಬೇಕು ಭೂತ ವಾಯುವಿನಲ್ಲಿ
ಆದರಿಸಿ ವ್ಯಂಜನ ಪದಾರ್ಥಂಗಳು
ಮೋದದಲ್ಲಿ ಇಟ್ಟು ಇದರ ಮಧ್ಯದಲ್ಲಿ
ಓದನ ಪಾತ್ರಿಯ ಇಡಬೇಕು ಪರಮಾನ್ನ
ಓದನ್ನದೆಡೆಯಲ್ಲಿ ಘೃತ ಪಾತ್ರಿ ದಧಿ ಮೊದ
ಲಾದವು ಸ್ಥಾಪಿಸಿ ಬದಿಯಲ್ಲಿ ತಾಂಬೂಲ
ಸ್ವಾದಾದೋಕವಿಟ್ಟು ದೇವಂಗೆ ಕೈ ಮುಗಿದು
ವೇದ ಮಂತ್ರಗಳಿಂದ ತುತಿಸಿ ಕೊಂಡಾಡುತ್ತ
ಬೋಧಮೂರುತಿ ನಮ್ಮ ವಿಜಯವಿಠ್ಠಲರೇಯಾ
ಆದಿ ಪರಬೊಮ್ಮಾ ಆತ್ಮನಂದು ನೆನೆಸೋ । ೪ ।

**ಆದಿತಾಳ**

ಭೋಜನ ಪಾತ್ರಿ ಮಂಡಿಸಿ ಮೊದಲು ದಿವ್ಯಾನ್ನವಿ
ರಾಜಿಸುವೋ ಲವಣ ವ್ಯಂಜನಾದಿ ದ್ವಿತಿಯಲ್ಲಿ
ಮಾಜದೆ ಸಾರುವೆ ಇದರ ತರುವಾಯ
ತೇಜವಾಗಿದ್ದ ಭಕ್ಷ್ಯ ಸರ್ವವು ಇಡಬೇಕು
ಮೂಜಗತ್ಪತಿ ರಂಗ ಇನಿತು ಕೈಕೊಂಬನೆಂದು
ನೈಜ ಭಾವದಿಂದ ಚಿಂತಿಸಬೇಕು ನೋಡಿ
ಭೋಜ್ಯ ಭೋಜಕ ಭೋಕ್ತ ಭೋಗಾನು ಹರಿಯಂದು
ಪೂಜ್ಯ ಪೂಜ್ಯಕನೆಂದು ಅಂತರ ಮುಖನಾಗೋ
ಈ ಜಡ ದ್ರವ್ಯದಿಂದ ತೃಪ್ತಿಯಾಗುವದೆಂತೋ
ರಾಜೀವನೇತ್ರ ಕೃಷ್ಣ ಹೊರಗೆ ಒಳಗೆ ಇಪ್ಪ
ವ್ಯಾಜರಹಿತನಾಗಿ ಮಾಡಲೋ ಮಾಡೆಲೊ
ರಾಜ ಪದವಿ ಉಂಟು ಎಂದಿಗೂ ನಾಶವಿಲ್ಲ

ಬೀಜ ಮಾತು ಪೇಳುವೆ ಹಲವು ಹಂಬಲಸಲ್ಲ
ಮೂಜಗದೊಳಗಿದ್ದ ವರ್ಣಂಗಳು ಶುಭ್ರ
ರಾಜಸ ಭಾಗ ಮತ್ತೆ ಪೀತ ಕಷ್ಣಪದಾರ್ಥ
ರಾಜಿಸುತಿಪ್ಪ ನಾಲ್ಕು ಬಗೆ ದ್ರವ್ಯಾಭಿಮಾನಿ
ರಾಜೀವ ಪೀಠ ವಾಯು ಸರಸ್ವತಿ ಭಾರತಿ
ರಾಜಶೇಖರ ಮೊದಲಾದ ತತ್ತ್ವದಲಿದ್ದ
ಸುಜನರು ಕೇಳಿ ಶುಭ್ರಾದಿ ವರ್ಣಕ್ರಮಕೆ
ಪೂಜೆವಂತರು ಅಲ್ಲಿ ವಾಸುದೇವ ಸಂಕರುಷಣ
ರೈಜನಕ ಪ್ರದ್ಯುಮ್ನ ಅನಿರುದ್ಧಮೂರ್ತಿ ವಾಸ
ಆ ಜನ್ಮಾರಾಭ್ಯವಾಗಿ ಇದೆ ಮಾತ್ರ ತಿಳಿದು ಮಹಾ
ರಾಜಾದಿಲೋಕದಲ್ಲಿ ವಾಸವಾಗುವುದು
ರಾಜಾ ರಾಜಾಪ್ತ ಪ್ರೀಯ ವಿಜಯವಿಠಲ ಪರಮ
ಸೋಜಿಗನು ಕಾಣೋ ಸಾಲಕಾಮಂಧ ಹರಣ ॥ ೫ ॥

**ಜತೆ**

ಚಿಂತನೆ ಪ್ರಕಾರ ವಿನಿಯೋಗ ಮಾಡು ಶ್ರೀ
ಕಾಂತ ವಿಜಯವಿಠಲ ಕೃಷ್ಣಗೆ ಪದಾರ್ಥಗಳ ॥ ೬ ॥

# ವಿಜಯದಾಸ ವಿರಚಿತ ಹಬ್ಬ ಸುಳಾದಿ

**ಧ್ರುವತಾಳ**

ಹಬ್ಬಂಗಳಿವೆ ಕೇಳಿ ಊರ್ಬಿಯೊಳಗೆ ವೈ
ದರ್ಭರಮಣ ಕರುಣಾಬ್ಧಿ ಒಲಿದ ಬಳಿಕ
ಒಬ್ಬರ ಕಾಡಿಬೇಡಿ ಒಬ್ಬರ ಹಬ್ಬ ಮಾಡಿದರಿಂದ
ಉಬ್ಬುತೀರದು ಕಾಣೋ ಆರ್ಬುದ ಜನಕ್ಕೆ
ಅಬ್ಬಿದಾವರ್ತಿ ಧಾನ್ಯರುಬ್ಬಿಗಂಜಿಯು ಕಾಸಿ
ಹಬ್ಬಿದ ಸುಖಮಾನ ವಬ್ಬಿಗೆ ಸತಿಪತಿ
ಇಬ್ಬರಾನಂದಲ್ಲಿ ಹೆಬ್ಬಟ್ಟಿನಲ್ಲಿ ಸವಿದು
ಸಭ್ಯವಾಗಿಪ್ಪುದು ಹಬ್ಬವೆ ಬಲಹಬ್ಬ
ನಿರ್ಭಯವಾದ ರತ್ನಗರ್ಭದಲ್ಲಿ ಕುಟೀರ
ಗುಬ್ಬಿಗೂಡಿನಷ್ಟು ಗರ್ಭವಾಸವೆ ರಚಿಸಿ
ಹಬ್ಬಿಗಿಕ್ಕದೆ ಏನು ನಿರ್ಬಂಧನವಿಲ್ಲದೆ
ಲಭ್ಯವಾಗಿಪ್ಪ ಗರ್ಭದ ಸುಖಿಗಳವರು
ಕರ್ಬುರನಂತೆ ತಿಂದು ಕೊಬ್ಬಿ ತಿರುಗುವಂಗೆ
ದುರ್ಭಾಗ್ಯವಲ್ಲದೆ ಹಬ್ಬವೆನಿಸುವುದೆ
ಕಬ್ಬು ಬಿಲ್ಲಿನಯ್ಯ ವಿಜಯವಿಠ್ಠಲರೇಯ
ದರ್ಭೆ ಏರಿಸಲು ಹಿಬ್ಬರ ಕರವಪಿಡಿವಾ । ೧ ।

**ಮಟ್ಟತಾಳ**

ಕಾಮಕ್ರೋಧಂಗಳು ಬಿಡುವುದೇ ಬಲು ಹಬ್ಬ
ನೇಮ ನಿತ್ಯವನ್ನೇ ಮಾಡುವುದೇ ಹಬ್ಬ
ತಾಮಸ ಜನರುಗಳ ಬಿಡುವುದೇ ಮಹಾ ಹಬ್ಬ
ಕಾಮನ ಉಪಹತಿಗೆ ಅಂಜುವದೇ ಹಬ್ಬ
ಭೂಮಿಯೊಳಗೆ ಜ್ಞಾನಿಯಾಗುವದೇ ಹಬ್ಬ
ಸ್ವಾಮಿ ಭೃತ್ಯನ್ಯಾಯ ತಿಳಿಯುವದೇ ಮಹಾ ಹಬ್ಬ
ಶ್ರೀ ಮಾರುತಿ ಮತವ ಹಾರೈಪುದೇ ಹಬ್ಬ
ಯಾಮಯಾಮಕ್ಕೆ ಹರಿನಾಮ ನೆನೆವುದೇ ಹಬ್ಬ
ವ್ಯೋಮಗಂಗೆಯ ಜನಕ ವಿಜಯವಿಠ್ಠಲ ಹರಿಯ
ಧಾಮವ ಜಯಸುವದೇ ಧರೆಯೊಳ ಮಹಾ ಹಬ್ಬ । ೨ ।

**ತ್ರಿವಿಡಿತಾಳ**

ಬಂದ ದುರಿತಗಳ ಪೋಗಾಡುವುದೇ ಹಬ್ಬ
ಮಂದಾಕಿನಿಯಲ್ಲಿ ಮಜ್ಜನವೇ ಹಬ್ಬ
ನಿಂದ್ಯಕಾರರ ನಿತ್ಯ ನಿಂದೆ ಮಾಳ್ಪುದೇ ಹಬ್ಬ
ವಂದಿಸಿ ಗುರುಗಳಿಗೆ ಎರಗುವದೇ ಹಬ್ಬ
ಮುಂದೆ ಪುಟ್ಟುವ ಜನನವ ನೀಗಿಕೊಂಬುದೇ ಹಬ್ಬ
ಬಂಧನವಾಗದ ಯೋಚನೆ ಬಲು ಹಬ್ಬ
ತಂದೆ ತಾಯಿಗಳಿಗೆ ಅನುಕೂಲವೇ ಹಬ್ಬ
ಅಂದನಗುತ ಸಂತೋಷವಾಹುದೇ ಹಬ್ಬ
ಕುಂದು ಸಜ್ಜನರಿಗೆ ನುಡಿಯದಿಪ್ಪದೇ ಹಬ್ಬ
ಬಿಂದು ಮಾತುರ ಭೋಗ ಬಯಸದಿಪ್ಪದೇ ಹಬ್ಬ

ಬಂದ ಅತಿಥಿಗಳ ಪೂಜಿಸುವುದೇ ಹಬ್ಬ
ಮಂದಿರದಲ್ಲಿ ಕಲಹವಿಲ್ಲದ್ದೇ ಮಹ ಹಬ್ಬ
ಇಂದು ನಾಳಿಗೆ ಇಂಬೊ ಚಿಂತೆ ಬಿಡುವುದೇ ಹಬ್ಬ
ಸಂದಣಿ ತೊರೆದು ಏಕಾಂತ ವಾಹದೆ ಹಬ್ಬ
ನಿಂದಿದ್ದಖಿಳರೊಳು ನರೆಯದಿಪ್ಪುದೇ ಹಬ್ಬ
ನಿಂದೆ ಬಾರದಂತೆ ಬಾಳುವುದೇ ಹಬ್ಬ
ಇಂದ್ವರ್ಕವುಳ್ಳ ನಕ ವಿಜಯವಿಠಲರೇಯನ
ಒಂದೇ ಭಕುತಿಯಲಿ ಭಜಿಪದೆ ಮಹಾ ಹಬ್ಬ । ೩ ।

**ಅಟ್ಟತಾಳ**

ಋಣರೂಪವಾಗದ ಸಂಸಾರವೇ ಹಬ್ಬ
ಗುಣವಂತನಾಗಿ ಸಂಚರಿಸುವುದೇ ಹಬ್ಬ
ಕನಸೀಲಿ ಹಣವನ್ನು ಬಯಸದಿಪ್ಪದೇ ಹಬ್ಬ
ಮನವಾಚ ಕಾಯಕ ಬಡತನವೇ ಹಬ್ಬ
ವನಜನಾಭನ ನೋಡಿ ಪಾಡುವುದೇ ಹಬ್ಬ
ದಿನಪ್ರತಿದಿನ ಸತ್ಕರ್ಮಾಚರಣೆ ಹಬ್ಬ
ಮಣಿಕರ್ಣಿಕೆಯಲ್ಲಿ ದೇಹತ್ಯಾಗವೇ ಹಬ್ಬ
ಮನೆ ನೆರೆ ಹೊರೆ ನೋಡಿ ಬಳಲದಿಪ್ಪದೆ ಹಬ್ಬ
ಅನಿಮಿಷ ಜಾಗರ ಹರಿವಾಸರವೇ ಹಬ್ಬ
ತನುವಿಗೆ ವ್ಯಾಧೆ ಬಾರದ್ದೊಂದೇ ಮಹಾ ಹಬ್ಬ
ಚಿನುಮಯ ಮೂರುತಿ ವಿಜಯವಿಠ್ಠಲರೇಯನ
ಮನಸಿನೊಳನುದಿನ ಈಕ್ಷಿಸುವುದೇ ಹಬ್ಬ । ೪ ।

**ಆದಿತಾಳ**

ಕಾಲನ ಭಾದಿಗೆ ಸಿಲುಕದಿಪ್ಪದೆ ಹಬ್ಬ
ಕಾಲಕಾಲಕೆ ತೀರ್ಥಯಾತ್ರೆ ಮಾಳ್ಪದೆ ಹಬ್ಬ
ಕೇಳುವ ಹರಿಕಥಾ ಶ್ರವಣವೇ ದೊಡ್ಡ ಹಬ್ಬ
ನಾಲಿಗಿಂದಲಿ ಹರಿಯ ಸ್ತೋತ್ರ ಮಾಳ್ಪದೇ ಹಬ್ಬ
ಆಳಾಗಿ ಒಬ್ಬನಲ್ಲಿ ವಶವಾಗದ್ದೊಂದು ಹಬ್ಬ
ಹಾಳು ಹರಟೆ ಬಿಟ್ಟು ಬಿಟ್ಟು ಹೊತ್ತು ಗಳಿಯುವುದೇ ಹಬ್ಬ
ಶ್ರೀಲೋಲ ಪರನೆಂದು ಕೂಗ್ಯಾಡುವದೇ ಹಬ್ಬ
ವಾಲಯಗಯದಲ್ಲಿ ಕುಲಪವಿತ್ರವೇ ಹಬ್ಬ
ಭಾಳಲಿಪಿಗೆ ನೋಯ ಆಡದಿಪ್ಪದೇ ಹಬ್ಬ
ವೇಳೆಗೆ ದೊರೆತದು ಭುಂಜಿಸುವುದೇ ಹಬ್ಬ
ಪಾಲಾಬ್ದಿಶಾಯಿ ನಮ್ಮ ವಿಜಯವಿಠ್ಠಲರೇಯನ
ಊಳಿಗದವನಾಗಿ ವಾಲ್ಗೈಸುವುದೇ ಹಬ್ಬ । ೫ ।

**ಜತೆ**

ದಂಪತಿಗಳು ಏಕವಾಗಿಪ್ಪುದೇ ಹಬ್ಬ ।
ಶಂಪದಂತೆ ವಿಜಯವಿಠ್ಠಲ ಪೊಳೆವುದೇ ಹಬ್ಬ । ೬ ।

## ವಿಜಯದಾಸರ ಹರಿದಾಸ ಲಕ್ಷಣ ಸುಳಾದಿ

**ಧ್ರುವತಾಳ**

ಹರಿದಾಸರ ಲಕ್ಷಣ ಇರಬೇಕು ಈ ಪರಿ
ಗರುವ ಕೋಪ ಮದ ಮತ್ಸರಾದಿ ಬಿಡಬೇಕು
ಮರುತ ಮತಕೆ ಎಲ್ಲಿ ಸರಿಗಾಣೆನೆನುತಲಿ
ಧರಿಯೋಳು ಕೂಗಿ ಡಂಗುರವ ಹೊಯಲಿಬೇಕು
ಎರಡಾರು ಪುಂಢ್ರವ ವಿರಚಿಸಿ ಪಂಚಮುದ್ರಾ
ಧರರಾಗಿ ತಪ್ತಾಂಕಿತ ಧರಿಸಬೇಕು ಭುಜದಲ್ಲಿ
ಶಿರಿಬೊಮ್ಮ ಹರಾದ್ಯರಿಗೆ ತಾರತಮ್ಯಭಾವದಿಂದ
ಎರಗಿ ಎನ್ನೊಳಗಿದ್ದು ಪೊರೆಯೆಂದಾಡಲಿಬೇಕು
ಕರಣ ನಯನ ಶ್ರವಣನಾಸಾವದನ
ಪರಿಪರಿ ಅಂಗಗಳು ಹರಿವಿತ್ತವೆನ್ನಬೇಕು
ಗುರುಹಿರಿಯರಿಗೆ ಆದರಪೂರ್ವಕದಿಂದ
ಕರಮುಗಿದು ನಮಸ್ಕರಿಸಿ ನುತಿಸಬೇಕು
ನೆರೆಹೊರೆಯವರಿಗೆ ನಿರುತ ಇದ್ದರು ಬೇ
ಸರಗೊಳಿಸದೆ ಸಂಚರಿಸುತ್ತಲಿರಬೇಕು
ಹಣ ಹರಿಯಾಧೀನ, ನೆರೆದ ಸತಿಸುತರು
ನಿರುತ ಹರಿಗೆ ದಾಸರು ಎಂದು ಗುಣಿಸಬೇಕು
ಪರಮ ಭಕುತಿ ಜ್ಞಾನವಿರಕುತಿ ಮಾರ್ಗವು
ದೊರಕುವುದಕ್ಕೆ ಸಜ್ಜನರ ಸಂಗವಾಗಬೇಕು
ಹರಿದಾಸ್ರ ಹರಿಚರಿತೆ ಹರಿಶ್ರವಣ ಹರಿಪೂಜೆ
ಹರಿಸ್ಮರಣೆ ಅಂತರ ಶುಚಿ ಇರಲಿಬೇಕು
ಹರಿ ಪರದೇವತಿ ವಿಜಯವಿಠಲ ಗತೀ
ಸುರರಾಧ್ಯರಿಗೆಂದು ಉರವಣಿಸಿ ನುಡಿಬೇಕು । ೧ ।

**ಮಟ್ಟತಾಳ**

ಪರಧನ ಪರಸತಿ ಪರನಿಂದ್ಯದವರ
ಸರಸದಲ್ಲಿರದೆ ಚರಿಸಬೇಕು ದೂರ
ನರರು ಬೈದರೆ ಆದರವೆಂದು ತಿಳಿದು
ಹರುಷ ಬಡಲಿಬೇಕು ಸುರತರು ದೊರೆತಂತೆ
ಕರೆದು ಮನ್ನಿಸಿದರು ಇರಳು ಹಗಲು ಪಾಲುಗರೆವ
ಸುರಧೇನು ಬರಡಾಗಿನಿಂದ ಪರಿಯೆಂದೆನಬೇಕು
ನೆರೆದು ಸಂದಣಿಯೊಳು ಚರಿಸಬಾರದು ಪೋಗಿ
ಬರಿದೆ ಕುಳಿತು ಹಾಳಹರಟೆಯ ಪೇಳದಲೆ
ಮರಿಯದೆ ಸೊಲ್ಲು ಇರಬೇಕು ತನ್ನೊಳಗೆ
ಪರಮ ತತ್ತ್ವವ ತಿಳಿದು ದುರಳರಿ
ಗರುಹದಲೆ ಸುರಿಯಬೇಕು ಸುಖವ
ಮರಳೆ ಮರಳೆ ನೆನೆದು ಪರಮಗುಪ್ತನಾದ ವಿಜಯ ವಿಠ್ಠ
ಲರೇಯನ ನೆರೆ ನಂಬಲಿಬೇಕು ಕುರುಹ ಕಾಣುವಂತೆ । ೨ ।

**ತ್ರಿವಿಡತಾಳ**

ಲೇಸಾದರು ಹರಿಯ ಕಾರುಣ್ಯವೆನಬೇಕು
ಲೇಸಾಗದೆ ಬಲು ಮೋಸವಾದಲ್ಲಿ
ಕ್ಲೇಶ ಬಂದಡರಲು ಏಸು ಜನ್ಮದ ಪಾಪ
ರಾಸಿಯ ಫಲಿಸಿತೋ ಎನ್ನ ಕರ್ಮ
ಈ ಶರೀರಕೆ ಬಂದು ಪ್ರಾಪ್ತವಾದುದು ಅನುಭ
ವಿಸದಲೇ ಬಿಡದು ಸಿದ್ಧವೆಂದು
ಲೇಶವಾದರೂ ದು:ಖ ಹಚ್ಚಿಕೊಳ್ಳದೆ ಮಹಾ
ತೋಷದಲ್ಲಿರಬೇಕು ನೋಯದಲೆ
ಶ್ರೀಶನೆ ಗತಿ ಎಂದು ಬೇಸರದಲೆ ಬಂದ

ಕ್ಲೇಶಗಳುಣಬೇಕು ಬಂದಾಗಲು
ದೇಶ ಕಾಲ ಗುಣ ಪರಿಪೂರ್ಣ ಹರಿ ಇರೆ
ಘಾಸಿ ಎಲ್ಲಿದೊ ಎಂದು ನಲಿಯಬೇಕು
ಶ್ರೀ ಸತಿ ಕಾಲ ವೇದ ಜೀವ ಪ್ರಳಯದಲ್ಲಿ
ನಾಶವಾಗವು ಭೇದ ಅನಲಿಬೇಕು
ವ್ಯಾಸ ವಚನ ಮಧ್ವರಾಯರು ಮಾಡಿದ
ಭಾಷ್ಯ ಸಮ್ಮತದಿಂದ ನೋಡಬೇಕು
ವಾಸುದೇವ ನಮ್ಮ ವಿಜಯವಿಠ್ಠಲನ್ನ
ದಾಸಾನುದಾಸರ ದಾಸನಾಗಲಿಬೇಕು । ೩ ।

**ಅಟ್ಟತಾಳ**

ಬಡತನ ಬಂದರು ಹಿಗ್ಗುತಲಿರಬೇಕು
ಜಡನಾಗಿ ಬಾಹ್ಯದಲ್ಲಿ ತೋರಲಿಬೇಕು
ಅಡಿಗಡಿಗೆ ಲಜ್ಜೆಗೇಡಬೇಕು ಸರ್ವದ
ಒಡಲಿಗೆ ಚಿಂತೆಮಾಡದೆ ದೃಢ ಇರಬೇಕು
ಒಡವೆ ವಸ್ತ್ರ ತಂದೆ ತಾಯಿ ತ್ರಿಲೋಕದ
ಒಡಿಯ ಶ್ರೀಕೃಷ್ಣನೆಂದು ಬಿಡದೆ ನಂಬಲಿಬೇಕು
ಯಡಿಗೆ ಪರಿಮಿತ ಧಾನ್ಯ ತರಲಿಬೇಕು
ಕೊಡಬೇಕು ಕೊಡಬೇಕು ಒಬ್ಬರಿಗದರೊಳು
ಕಡುಗಲಿ ವಿಜಯವಿಠಲ ರಂಗನಪಾದ
ಪಿಡಿದು ಭಜಿಸಬೇಕು ನಲಿನಲಿದಾಡುತ್ತ । ೪ ।

**ಆದಿತಾಳ**

ಉಟ್ಟದಕ್ಕಿಂತ ಮೇಲು ತೊಟ್ಟದಕ್ಕಿಂತ ಮೇಲು
ಇಟ್ಟದಕ್ಕಿಂತ ಮೇಲು ವಿಠಲನ್ನ ಸ್ಮರಣೆ ಮನ
ಮುಟ್ಟಿ ನಮಿಸಲಿಬೇಕು ಬಲುಹಿತದಲ್ಲಿ
ಅಟ್ಟಹಾಸದಲ್ಲಿ ಚೀರಿ ಬಿಟ್ಟಿಕ್ಕಿ ಕೂಗಿ ತೂಗುತ
ಇಷ್ಟಸುಖಕ್ಕಿಂತ ಮೇಲು
ದಟ್ಟಡಿಯಿಂದ ತಿಳಿದು ನಿಷ್ಠೆಯಿಂದಲಿ ಇರಲು
ಇಷ್ಟಪ್ರಾಪುತ ಅವರಿಗರಿಷ್ಟವು ಪರಿಹಾರ
ಹುಟ್ಟುಸಾವಿಲ್ಲದ ವಿಜಯವಿಠಲ ತಾನು
ಕೊಟ್ಟು ಸಾಕುವ ದಯವಿಟ್ಟು ದಾಸನ ಮಾಡಿ । ೫ ।

**ಜತೆ**

ಈ ಪರಿ ಇದ್ದವಂಗೆ ಅನಂತ ಜನುಮಕ್ಕೆ
ತಾಪತ್ರಯಗಳಿಲ್ಲ ವಿಜಯವಿಠಲ ಬಲ್ಲ । ೬ ।

## ವಿಜಯದಾಸರ "ಶ್ರೀನಿವಾಸ" ಸುಳಾದಿಗಳು

ಮುಪ್ಪು ಇಲ್ಲದ ಅಪ್ಪ ತಿರುಪತಿ ತಿಮ್ಮಪ್ಪ ।
ಮುಪ್ಪು ಇಲ್ಲದ ತಾಯಿ ಅಲುಮೇಲು ಮಂಗಾಯಿ ।
ಮುಪ್ಪು ಇಲ್ಲದ ಗುರು ಶ್ರೀಮದಾಚಾರ್ಯರು ।
ಮುಪ್ಪು ಇಲ್ಲದ ಬಾಂಧವರು ಹರಿಭಕ್ತರು ।
ಮುಪ್ಪು ಇಲ್ಲದ ಧನ ಹರಿನಾಮ ಸಾಧನ ।
ಮುಪ್ಪು ಇಲ್ಲದ ಸಧನ ದಿವ್ಯಾನಂತಾಸನ ।
ಮುಪ್ಪೆ ಮುಪ್ಪೇ ಇಲ್ಲ ಎಮ್ಮ ಸೌಭಾಗ್ಯಕ್ಕೆ ।
ಮುಪ್ಪುರದೊಳಗೆ ಹರಿದಾಸರಿಗೆ ಎಣೆಯೆ ।
ಮುಪ್ಪುರವಗೆಲಿದ ಅನಘ ವಿಜಯವಿಠಲರೇಯ ।
ಅಪ್ಪಾ ಭಕ್ತರ ಒಡನಾಡುವುದು ತಪ್ಪು ।೧।

ಮಟ್ಟತಾಳ

ಉಡಲು ಉಣಲುಂಟು ಕೊಡಲು ಕೊಣಲುಂಟು ।
ಅಡಗಾಣಿಪ ಭವಕಡಲಾಯಾಸವನು ।
ಬಡದೆ ದಾಟಲಿವುಂಟು ಸಡಗರದಲಿ ।
ದಟ್ಟಡಿ ಹರಿನಾಮವ ಹಡಗವೆಂಬುದು ।
ಕೈವಿಡಿದು ಸುಖವನ್ನು ಪಡೆದು ವಿಜಯವಿಠ-
ಲೊಡೆಯನ ಪಾದವ ಬಿಡದೆ ನೆರೆನಂಬುಡುವುದು ವಿಪತ್ತು । ೨ ।

ತ್ರಿವಿಡಿ ತಾಳ
ಅಚ್ಚುತನ್ನ ನಾಮಾ ಅಚ್ಚು ಹೊಯಿದಂತೆ ।
ಅನಂತನ ನಾಮಾ ಕೊನಿನಾಲಿಗೆಯಲ್ಲಿ ।
ಪಚ್ಚಿಸಿಕೊಂಡು ಆ ಪರಮಾನಂದದಿಂದಾ।

ಕೆಚ್ಚೆದೆಯ ಯಮಭಟರ ತಾವಿಗೆ ।
ಕಿಚ್ಚುಬೀರುತಲಿ ವೈಷ್ಣವರ ಸುಮತವೆಂಬೋ ।
ರಚ್ಚೆಯಾ ಬಿಡದೆ ಬಲು ಬಿಂಕಾದಲ್ಲೀ ।
ವಾಚಸ್ಪತಿ ವಿಜಯವಿಠಲನ ಭಕುತಿಗೆ ।
ಚೊಚ್ಚಲಮಗನಾಗಿ ಚರಿಸು ಜಾಣನಾಗಿ ।೩ ।

ಅಟ್ಟತಾಳ

ಈತನು ಈತನು ಈತನು ಪುಟ್ಟಿಸಿದ ।
ಈತನು ಈತಗೆ ಸಂತರ್ಪಣೆ ಮಾಡಿ ।
ಈತನ ಪೂಜಿಪ ದೂತರ ಬೆರೆದಾಡು ।
ಈತನುವೊಳಗಿದ್ದ ವಿಷಯಾದಿಗಳ ಬಿಟ್ಟು ।
ಈತನು ನೆಚ್ಚಿದ ಇಷ್ಟಾರ್ಥವೀವ ಪು–
ರಾತನ ವಿಜಯವಿಠಲನ ಪಾದದಲಿ ।
ಈತನು ವಿಟ್ಟು ವರಗಳ ಬೇಡೊ ।೪ ।

ಆದಿತಾಳ

ಹರಿಸರ್ವೋತ್ತಮನಹುದೆಂದು ।
ಅರಮನೆ ಇಲ್ಲದಲೆ ಬಿರುದನು ವಹಿಸಿ ।
ಉರಗನ ಕಲಕಿ ತೊರೆಯದೆ ಬಿಂಕವ ।
ಧರೆಯೊಳಗೆ ಡಂಗುರವನು ಸಾರಿ ।
ಪರಮೇಶ್ವರ ವಿಜಯವಿಠಲನ್ನ ।
ಶರಣರಿಗೆ ಭಯಗಳು ಇಲ್ಲೆಂದು । ೫ ।

ಜತೆ

ಮಾತುಮಾತಿಗೆ ತಿರುವೆಂಗಳೇಶಾ ಎನ್ನು ।
ಭೂತಕೃತ್ ವಿಜಯವಿಠಲನ ಪಾದವ ಕಾಣೋ । ೬ ।